ಇಲಾಖೆಯವರು ಹೇಳುತ್ತಿದ್ದಾರೆ. ಐದು ವರ್ಷಗಳಾದರೂ ಆ ಪ್ರಾಜೆಕ್ಟ್ ಮುಗಿದಿಲ್ಲ.

ಅಧ್ಯಕ್ಷರು:– ನಾಳೆ ಹಾಕೋಣ. ರೇವಣ್ಣನವರು ನಾಳೆ ಹಾಕೋಣ.

3) ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಾಚರಕನಹಳ್ಳಿ ಮತ್ತು ಕೋಡಿಹಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರುಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಕೆ.ಎಸ್. ಮಂಜುನಾಥಗೌಡ (ಮಾಲೂರು):– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಾಚರಕನಹಳ್ಳಿ ಮತ್ತು ಕೋಡಿಹಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರುಗಳಿಗೆ ತೊಂದರೆಯಾಗಿದೆ. ಈ ಕಾಮಗಾರಿಗೆ ಈಗಾಗಲೇ work order ಆಗಿದೆ, agreement period ಮುಗಿದಿದೆ. ಏಕೆ ಈ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಿದೆ ಎಂಬ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಟೆಂಡರ್ ಆಗಿದೆ. Amrutha Constructions Private Limited Company ಗೆ ಎರಡು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನಾವು ನೇಮಿಸಿದ್ದೇವೆ. ಬಂಡ್ ಅನ್ನು ಈ ವಾರದೊಳಗೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಆದಷ್ಟು ಬೇಗನೆ ಕಾಮಗಾರಿ ಪ್ರಾರಂಭಿಸುತ್ತೇವೆ.

ಶ್ರೀ ಕೆ.ಎಸ್. ಮಂಜುನಾಥಗೌಡ:– ಅಧ್ಯಕ್ಷರೆ, ಇಲ್ಲಿ ಸುಳ್ಳು ಹೇಳುತ್ತಿದ್ದಾರೆ. ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. Work period ಕೂಡ ಮುಗಿದುಹೋಗಿದೆ.

ಅಧ್ಯಕ್ಷರು:– ಒಂದು ನಿಮಿಷ ಕೇಳಿ, work order ಯಾವಾಗ ಕೊಟ್ಟಿದ್ದೀರಿ?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಒಂದನೇ ತಿಂಗಳಿನಲ್ಲಿ ನಾವು ಅವರಿಗೆ work order ಕೊಟ್ಟಿದ್ದೆವು. 10ನೇ ತಿಂಗಳಿಗೆ ಆ date ಮುಗಿದಿದೆ. ಮತ್ತೊಮ್ಮೆ ನಾವು ಅವರಿಗೆ 9 ತಿಂಗಳು ಕಾಲಾವಕಾಶ ಕೊಟ್ಟು ಆ ಕಾಮಗಾರಿಯನ್ನು ಕಾಲಮಿಯೊಳಗೆ ಮುಗಿಸುತ್ತೇವೆ. ಅಲ್ಲಿ ಇನ್ನೊಂದು ಸಮಸ್ಯೆ ಇದೆ ಅದನ್ನು ಹೇಳಿಬಿಡುತ್ತೇನೆ. ಅಲ್ಲಿ ಇಬ್ಬರು ಶಾಸಕರ ಮಧ್ಯೆ ಸಮಸ್ಯೆಯಾಗಿದೆ.

ಅಧ್ಯಕ್ಷರು:– ಅವೆಲ್ಲಾ ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಆ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಮಾನ್ಯ ಶಾಸಕರಾದ ಮಂಜುನಾಥಗೌಡರು ಏನು ಹೇಳುತ್ತಾರೆಂದರೆ 9 ತಿಂಗಳ ಕಾಲಮಿತಿಯೊಳಗೆ ಆ ಕಾಮಗಾರಿಯನ್ನು ಮುಗಿಸುವಂಥ ಕೆಲಸ ಮಾಡುತ್ತೇವೆ.

ಶ್ರೀ ಕೆ.ಎಸ್. ಮಂಜುನಾಥಗೌಡ:– ಆ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ.

ಅಧ್ಯಕ್ಷರು:– ನಿಮಗೆ ಅದೆಲ್ಲಾ ಮಾತನಾಡಬೇಡಿ. No, No, Please resume.

ಶ್ರೀ ಕೆ.ಎಸ್. ಮಂಜುನಾಥಗೌಡ:– ಕಾಂಗ್ರೆಸ್‌ಗೆ ಓಟ ಹಾಕಿದ್ದೇವೆಂಬ ಒಂದೇ ಕಾರಣಕ್ಕೆ ಎರಡು ಗ್ರಾಮಗಳಿಗೆ ನೀರು ಕೊಡುತ್ತಿಲ್ಲ. ಅದೇ ಆಗಿರುವುದು ಹೇಳಿ ಅವರನ್ನು.

ಅಧ್ಯಕ್ಷರು:– ಸುಮ್ಮನೆ ಅದೆಲ್ಲ ಮಾತನಾಡಬೇಡಿ. ಸುಮ್ಮನಿರಿ ಅವರಿಗೆ ಉತ್ತರ ಕೊಡಬೇಡಿ.

ಮುಂದಿನ ಪ್ರಶ್ನೆ ಗೋವಿಂದ ಎಂ. ಕಾರಜೋಳ ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಅಧ್ಯಕ್ಷರೆ, ತಾವು ಬೇಸರಪಟ್ಟುಕೊಂಡರೆ ಹೇಗೆ?

ಅಧ್ಯಕ್ಷರು:– ಹಾಗಲ್ಲ,

ಶ್ರೀ ಹೆಚ್.ಸಿ. ಬಾಲಕೃಷ್ಣ:– ಅವರು ಹೊಸ ಶಾಸಕರಾಗಿ ಬಂದಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

(ಗೊಂದಲ)

(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:– ನೋಡಿ, ದಯವಿಟ್ಟು ಗಮನ ಸೆಳೆಯುವ ಸೂಚನೆಯಲ್ಲಿ ಎಷ್ಟು ಅವಕಾಶ ಇದೆ ಅಷ್ಟನ್ನು ಬಳಸಿಕೊಳ್ಳಬೇಕು. ಸುಮ್ಮನೆ ನಾನೇನು ತಮಾಷೆ ಮಾಡುತ್ತಿದ್ದೇನೆಯೇ? ನನಗೂ ಮಾನ್ಯ ಶಾಸಕರು ಕೇಳುವ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಿಸಬೇಕೆನ್ನುವ ಆಸಕ್ತಿ ಇದೆ.

(ಗೊಂದಲ)

ಶ್ರೀ ಕೆ.ಎಸ್. ಮಂಜುನಾಥಗೌಡ:– ಅಧ್ಯಕ್ಷರೆ, ಈಗಾಗಲೇ ಆ ಕಂಟ್ರಾಕ್ಟರ್ ಇವರಿಗೆ ನೋಟಿಸ್ ಕಳುಹಿಸಿದ್ದಾರೆ. ಆ ಕಾಮಗಾರಿಯ 9 ತಿಂಗಳು ಅವಧಿ ಮುಗಿದಿದೆ. ನನಗೆ ಹೊಸ S.R. value ಹಾಕಿಕೊಡಿ ಎಂದು ಕೇಳಿದ್ದಾರೆ. ಅವನು ಕೆಲಸ ಮಾಡುವುದಿಲ್ಲ. ಅದನ್ನು ಹೇಳುತ್ತಿದ್ದೇನೆ.

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಮಂಜುನಾಥಗೌಡರೆ, ಅದೇನೇ ಇರಲಿ, ನಾವು ಮತ್ತೊಮ್ಮೆ Amrutha Constructions Private Limited Company ಜೊತೆ ಮಾತನಾಡಿದ್ದೇವೆ.

ಅಧ್ಯಕ್ಷರು:– ಅವರು ಹೈದರಾಬಾದ್‌ನವರಾ, ಬೆಂಗಳೂರಿನವರಾ?

ಶ್ರೀ ಶಿವರಾಜ ಎಸ್. ತಂಗಡಗಿ:– ಬೆಂಗಳೂರಿನವರೇ, ಮತ್ತೆ ನಾವು ಅವರಿಗೆ 9 ತಿಂಗಳು ಸಮಯ ಕೊಟ್ಟಿದ್ದೇವೆ. ಕೆಲವೊಂದು ಕಾರಣಗಳಿಂದ ಅದು ಬಂದ್ ಆಗಿರುವುದು ಸತ್ಯ ಅಧ್ಯಕ್ಷರೆ, ಆದರೆ ಈಗ special ಆಗಿ

ನಾವೇ ಕರೆದು ಸಭೆ ಮಾಡಿ ಅದನ್ನು ಈಗ ಸಧ್ಯ ಆ ಕಾಮಗಾರಿಯನ್ನು ಪ್ರಾರಂಭ ಮಾಡಿಸುತ್ತೇವೆ.

ಅಧ್ಯಕ್ಷರು:– ಇನ್ನಾವುದೆ ಕಾರಣಕ್ಕೂ ನಿಲ್ಲಿಸುವುದಿಲ್ಲವೇ?

ಶ್ರೀ ಶಿವರಾಜ ಎಸ್. ತಂಗಡಗಿ:– ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಅದನ್ನು ಪ್ರಾರಂಭ ಮಾಡಿದ್ದೇವೆ. ಆ ಕಾಮಗಾರಿಯನ್ನು ಮಾಡುತ್ತೇವೆ.

ಅಧ್ಯಕ್ಷರು:– ಗೋವಿಂದ ಎಂ. ಕಾರಜೋಳ

4) ವಿಷಯ: ವಿಜಯಪುರ ಜಿಲ್ಲೆ ಮತ್ತು ತಾಲ್ಲೂಕಿನ ಮಕಣಾಪುರ ಗ್ರಾಮದ ಹಲವು ದಲಿತ ಕುಟುಂಬದವರನ್ನು ಒಕ್ಕಲೆಬ್ಬಿಸಿ, ವಶಪಡಿಸಿಕೊಂಡಿರುವ ಜಮೀನನ್ನು ಅವರಿಗೆ ಹಿಂದಿರುಗಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಮಕಣಾಪುರ ಗ್ರಾಮದಲ್ಲಿ ಸರ್ವೆ ನಂಬರ್ 192, 193. 1981 ರಲ್ಲಿ ಬಿಜಾಪುರದ special Deputy Commissioner ರವರು 12 ಜನ ದಲಿತ ಕುಟುಂಬಗಳಿಗೆ ಈ ಜಮೀನನ್ನು ಕೊಟ್ಟಿದ್ದರು. ಅವರು ಇದುವರೆಗೆ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರು ಬಡವರು, ಅನಕ್ಷರಸ್ಥರು ತಮ್ಮ ಹೆಸರಿನಲ್ಲಿ ಕಾಗದಪತ್ರಗಳನ್ನು ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಕಳೆದ 15 ದಿವಸಗಳಿಂದ ..

ಅಧ್ಯಕ್ಷರು:– ಅವರಿಗೆ ಮಂಜೂರಾಗಿತ್ತೇ ಇಲ್ಲವೇ? ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆಯೇ? ಇದುವರೆಗೆ ಯಾವಾಗ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿ?

ಶ್ರೀ ಗೋವಿಂದ ಎಂ. ಕಾರಜೋಳ:– ಮಂಜೂರಾಗಿದೆ, ನನ್ನ ಹತ್ತಿರ order copy ಇದೆ. ಸಾಗುವಳಿ ಚೀಟಿ ಕೊಟ್ಟಿಲ್ಲ. Deputy Commissioner ರವರು order ಕೊಟ್ಟಿದ್ದು ಇದೆ. ಪಂಚಾಯತ್‌ನವರಿಗೆ Deputy